ರಾಜ್ಯ ಸಕ್ಷಮ ಪ್ರಾಧಿಕಾರ,
ಪಿ.ಸಿ & ಪಿ.ಎನ್.ಡಿ.ಟಿ ಕಾಯ್ದೆ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ,
1ನೇ ಅಡ್ಡರಸ್ತೆ, ಮಾಗಡಿರಸ್ತೆ,
ಬೆಂಗಳೂರು – 23

ಕರ್ನಾಟಕ ಸರ್ಕಾರ
Government of Karnataka

State Appropriate Authority,
PC & PNDT Act
Health and Family Welfare Services
Arogya Soudha, 1st Main Road, Magadi Road, Bengaluru - 23

ಸಂಖ್ಯೆ: ಡಿಡಿ/ಪಿ.ಸಿ&ಪಿ.ಎನ್.ಡಿ.ಟಿ/ 13 /2024-25 ದಿನಾಂಕ: 19-06-2024

## ಸುತ್ತೋಲೆ

ವಿಷಯ: ಯಶ್ವಸಿಗೊಂಡ ಗುಪ್ತಕಾರ್ಯಾಚರಣೆ / ಮಾಹಿತಿ ನೀಡುವವರಿಗೆ ನೀಡುವ ಬಹುಮಾನ ರೂ. 50,000/- ಮೊತ್ತದಿಂದ ರೂ. 1,00,000/- ಕ್ಕೆ ನೀಡುವ ಕುರಿತು.

ಉಲ್ಲೇಖ:
1) 2024-25 ನೇ ಸಾಲಿನ ಆರ್.ಓ.ಪಿ. Sl.No. 19.13 ರಲ್ಲಿ ಅನುಮೋದನೆಯಾಗಿರುವಂತೆ.
2) ದಿನಾಂಕ: 11-12-2023 ರಂದು ಸನ್ಮಾನ್ಯ ಆರೋಗ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಮೇಲ್ವಿಚಾರಣಾ ಮಂಡಳಿಯ ಸಭೆಯ ನಿರ್ಧಾರದಂತೆ.

* * * *

ಗರ್ಭಪೂರ್ವ ಮತ್ತು ಪ್ರಸವಪೂರ್ವ ಲಿಂಗ ಪತ್ತೆ ತಂತ್ರವಿಧಾನಗಳು (ಲಿಂಗ ಆಯ್ಕೆ ನಿಷೇಧ) ಕಾಯ್ದೆ 1994 ಅನುಷ್ಠಾನಕ್ಕೆ ಸಂಬಂಧಿಸಿದಂತೆ, ಯಶ್ವಸಿಗೊಂಡ ಗುಪ್ತಕಾರ್ಯಾಚರಣೆಗೆ / ಮಾಹಿತಿ ನೀಡುವ ಮಾಹಿತಿದಾರರಿಗೆ ಈಗಾಗಲೇ 2024-25 ನೇ ಸಾಲಿನ ಆರ್.ಓ.ಪಿ. Sl.No. 19.13 ರಲ್ಲಿ ಅನುಮೋದನೆಯಾಗಿರುವಂತೆ ರೂ. 50,000/- (ರೂ. ಐವತ್ತು ಸಾವಿರಗಳು) ಬಹುಮಾನವಾಗಿ ನೀಡಲಾಗುತ್ತಿದೆ.

ದಿನಾಂಕ: 11-12-2023 ರಂದು ಸನ್ಮಾನ್ಯ ಆರೋಗ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಮೇಲ್ವಿಚಾರಣಾ ಮಂಡಳಿಯ ಸಭೆಯಲ್ಲಿ ಪಿ.ಸಿ&ಪಿ.ಎನ್.ಡಿ.ಟಿ. ಕಾಯ್ದೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ, ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ನೀಡುವ ರೂ. 50,000/- (ರೂ. ಐವತ್ತು ಸಾವಿರಗಳು) ಮೊತ್ತವನ್ನು ರೂ. 1,00,000/- (ರೂ. ಒಂದು ಲಕ್ಷಗಳು) ಗಳಿಗೆ ಏರಿಕೆ ಮಾಡಲು ನಿರ್ಧಾರಿಸಲಾಯಿತು.

ಅದರಂತೆ, ಯಶ್ವಸಿಗೊಂಡ ಗುಪ್ತಕಾರ್ಯಚಾರಣೆ / ಮಾಹಿತಿ ನೀಡುವವರಿಗೆ ನೀಡುವ ಬಹುಮಾನ ರೂ. 50,000 ವನ್ನು ರಾಷ್ಟ್ರೀಯ ಆರೋಗ್ಯ ಅಭಿಯಾನದಿಂದಲೂ (ಆರ್.ಓ.ಪಿ Sl.No. 19.13 ರಲ್ಲಿ), ಇನ್ನುಳಿದ ರೂ. 50,000/- ಮೊತ್ತವನ್ನು ಆಯಾ ಜಿಲ್ಲೆಗಳಲ್ಲಿ ಸಂಗ್ರಹವಾಗಿರುವ ಪಿ.ಸಿ&ಪಿ.ಎನ್.ಡಿ.ಟಿ. ಶುಲ್ಕದಿಂದ ನೀಡಲು ಆದೇಶಿಸಿದೆ.

19.6.24
ಆಯುಕ್ತರು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

**ಇವರಿಗೆ:**
1) ಎಲ್ಲಾ ಜಿಲ್ಲೆಯ ಜಿಲ್ಲಾ ಸಕ್ಷಮ ಪ್ರಾಧಿಕಾರಿಗಳು, ಪಿ.ಸಿ&ಪಿ.ಎನ್.ಡಿ.ಟಿ. ಕಾಯ್ದೆ ರವರ ಸೂಕ್ತ ಕ್ರಮಕ್ಕಾಗಿ.
2) ಎಲ್ಲಾ ಜಿಲ್ಲೆಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಸೂಕ್ತ ಕ್ರಮಕ್ಕಾಗಿ.
3) ಎಲ್ಲಾ ಜಿಲ್ಲೆಯ ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿಗಳ ಸೂಕ್ತ ಕ್ರಮಕ್ಕಾಗಿ.
4) ಎಲ್ಲಾ ಜಿಲ್ಲೆಯ ಜಿಲ್ಲಾ ಸಲಹಾ ಸಮಿತಿಯ ಸದಸ್ಯರ ಗಮನಕ್ಕಾಗಿ.
5) ಎಲ್ಲಾ ಜಿಲ್ಲೆಯ ಜಿಲ್ಲಾ ತಪಾಸಣಾ ಮತ್ತು ಮೇಲ್ವಿಚಾರಣಾ ಸಮಿತಿಯ ಸದಸ್ಯರ ಗಮನಕ್ಕಾಗಿ.

. . . .. .2

**ಪ್ರತಿಯನ್ನು ಗೌರವ ಪೂರ್ವಕ ಮಾಹಿತಿಗಾಗಿ:**

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ವಿಕಾಸಸೌಧ, ಬೆಂಗಳೂರು.
2) ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ, ಬೆಂಗಳೂರು.
3) ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯಅಭಿಯಾನ, ಆರೋಗ್ಯ ಸೌಧ, ಬೆಂಗಳೂರು.
4) ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ, ಬೆಂಗಳೂರು.
5) ಕಛೇರಿ ಪ್ರತಿ.